15/02/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಆತ್ಮವೆಂಬ ದೀಪದಲ್ಲಿ ಯೋಗವೆಂಬ ಎಣ್ಣೆ ಹಾಕಿದಾಗ ಆತ್ಮ ಶಕ್ತಿಶಾಲಿ ಆಗಿ ಬಿಡುತ್ತದೆ"

ಪ್ರಶ್ನೆ: ಆತ್ಮರೂಪಿ ಬ್ಯಾಟರಿಯಲ್ಲಿ ಶಕ್ತಿ ತುಂಬುವ ಆಧಾರ ಏನಾಗಿದೆ?

ಉತ್ತರ: ಆತ್ಮರೂಪಿ ಬ್ಯಾಟರಿಯಲ್ಲಿ ಶಕ್ತಿ ತುಂಬಲು ಬುದ್ಧಿಯೋಗದ ಬಲ ಬೇಕಾಗಿದೆ. ಯಾವಾಗ ಬುದ್ಧಿಯೋಗದ ಬಲದಿಂದ ಸರ್ವಶಕ್ತಿವಂತ ತಂದೆಯನ್ನು ನೆನಪು ಮಾಡುತ್ತೇವೆ, ಆಗ ಬ್ಯಾಟರಿ ತುಂಬುತ್ತದೆ. ಬ್ಯಾಟರಿಯಲ್ಲಿ ಶಕ್ತಿಯಿಲ್ಲವೆಂದರೆ ಜ್ಞಾನ ಧಾರಣೆ ಆಗುವುದಿಲ್ಲ. ಆತ್ಮನಲ್ಲಿ ಸಂಪೂರ್ಣ ಪ್ರಕಾಶ ಬರಬೇಕಾದರೆ ಸಮಯ ಬೇಕಾಗುತ್ತದೆ. ನೆನಪು ಮಾಡುತ್ತಾ ಮಾಡುತ್ತಾ ಆತ್ಮ ಸಂಪೂರ್ಣ ಪ್ರಕಾಶಮಾನವಾಗಿ ಬಿಡುತ್ತದೆ.

ಗೀತೆ: ರಾತ್ರಿಯ ಪ್ರಯಾಣಿಕನೇ ಸುಸ್ತಾಗಬೇಡ...........

ಓಂ ಶಾಂತಿ. ಮಕ್ಕಳು ಗೀತೆಯ ಅರ್ಥವನ್ನು ಕೇಳಿದ್ದೀರಿ. ನೀವೀಗ ಹಗಲಿನಲ್ಲಿ (ಸ್ವರ್ಗ) ಹೋಗುವ ಸಲುವಾಗಿ ಪುರುಷಾರ್ಥ ಮಾಡುತ್ತಿರುವಿರಿ. ಹೊಸ ಪ್ರಪಂಚದಲ್ಲಿ ಪ್ರಕಾಶವೇ ಪ್ರಕಾಶ (ಸುಖವೇ ಸುಖ) ಇರುತ್ತದೆ. ಹಳೆಯ ಪ್ರಪಂಚದಲ್ಲಿ ಕತ್ತಲೇ-ಕತ್ತಲಾಗಿದೆ (ದುಃಖವೇ ದುಃಖ) ಇದು ಬ್ರಹ್ಮನ ಘೋರ ಅಂಧಕಾರ ರಾತ್ರಿಯಾಗಿದೆ. ನೀವೀಗ ಹಗಲಿನಲ್ಲಿ ಹೋಗುತ್ತಿದ್ದೀರಿ. ಬುದ್ಧಿಯಿಂದ ತಂದೆಯನ್ನು ನೆನಪು ಮಾಡಿ ಮಾಡಿ ಸುಸ್ತಾಗಬಾರದೆಂದು ತಂದೆ ಮಕ್ಕಳಿಗೆ ತಿಳಿಸುತ್ತಿದ್ದಾರೆ. ನೀವೆಷ್ಟು ತಂದೆಯನ್ನು ನೆನಪು ಮಾಡುತ್ತೀರಿ ಅಷ್ಟು ಆತ್ಮದ ಪ್ರಕಾಶ ಹೆಚ್ಚುತ್ತದೆ. ನಂದಿ ಹೋಗಿರುವ ಆತ್ಮವೆಂಬ ದೀಪದ ಬೆಳಕು ಮತ್ತೆ ಬೆಳಗಲ್ಪಡುತ್ತದೆ. ಆ ವಿದ್ಯುತ್ನಲ್ಲಿ ತಕ್ಷಣ ಶಕ್ತಿ ಬಂದು ಬಿಡುತ್ತದೆ ಆದರೆ ಆತ್ಮದಲ್ಲಿ ಸಂಪೂರ್ಣ ಪ್ರಕಾಶತೆ ಬರಲು ಸಮಯ ಬೇಕಾಗುತ್ತದೆ. ಅಂತ್ಯದ ವೇಳೆಗೆ ಸಂಪೂರ್ಣ ಪ್ರಕಾಶವಾಗಿ ಬಿಡುತ್ತದೆ. ವಾಹನದ ಬ್ಯಾಟರಿ ಇಡೀ ರಾತ್ರಿ ತುಂಬಿಸುವಂತೆ ತಂದೆಯನ್ನು ರಾತ್ರಿಯೆಲ್ಲಾ ನೆನಪು ಮಾಡಬೇಕು. ಇದೂ ಸಹ ವಾಹನವಿದ್ದಂತೆ, ಆದರೆ ಈಗ ಎಣ್ಣೆ ಸಮಾಪ್ತಿಯಾಗಿ ಬಿಟ್ಟಿದೆ ಅಥವಾ ಶಕ್ತಿ ಕಡಿಮೆ ಆಗಿ ಬಿಟ್ಟಿದೆ. ತಂದೆಗೆ ಪವರ್ಫುಲ್ ಸರ್ವಶಕ್ತಿವಂತನೆಂದು ಕರೆಯಲಾಗುತ್ತದೆ. ಬುದ್ಧಿಯೋಗ ಬಲದ ವಿನಃ ಈ ಬ್ಯಾಟರಿಗೆ ಶಕ್ತಿ ತುಂಬುವುದಿಲ್ಲ. ಸರ್ವಶಕ್ತಿವಂತ ತಂದೆಯ ಜೊತೆ ಸಂಬಂಧ ಜೋಡಿಸುವುದರಿಂದ ಬ್ಯಾಟರಿ ತುಂಬುತ್ತದೆ. ಬ್ಯಾಟರಿ ತುಂಬದಿದ್ದಾಗ ಜ್ಞಾನ ಧಾರಣೆ ಆಗುವುದಿಲ್ಲ. ಆದುದರಿಂದ ತಂದೆಯು ನನ್ನನ್ನು ನೆನಪು ಮಾಡಿ ಆಸ್ತಿಯನ್ನು ತೆಗೆದುಕೊಳ್ಳಬೇಕೆಂದು ಮತ್ತೆ ಮತ್ತೆ ತಿಳಿಸುತ್ತಿರುತ್ತಾರೆ. ಮನ್ಮನಾಭವವು ಎಷ್ಟೊಂದು ಸಹಜ ಮಾತಾಗಿದೆ. ರಾಮ-ರಾಮ ಎಂದು ಜಪ ಮಾಡುತ್ತಾ ಮನುಷ್ಯರು ರಾಮ ರಾಜ್ಯವನ್ನು ಇಷ್ಟ ಪಡುತ್ತಾರೆ. ಆದರೆ ರಾಮ-ರಾಮನೆಂದು ಜಪ ಮಾಡುವುದರಿಂದ ರಾಮ ರಾಜ್ಯ ಬರುವುದಿಲ್ಲ. ಹೀಗೆ ನಾವು ಗಂಗಾದಡದಲ್ಲಿ ಕುಳಿತು ಜನ್ಮ ಜನ್ಮಾಂತರದಿಂದ ರಾಮ-ರಾಮನೆಂದು ಜಪ ಮಾಡುತ್ತಾ ಬಂದಿದ್ದೇವೆ. ಅವರಿಗೆ ರಾಮ ರಾಜ್ಯವೆಂದು ಯಾವುದಕ್ಕೆ ಹೇಳುತ್ತೇವೆಂದು ಯಾರಿಗೂ ಗೊತ್ತಿಲ್ಲ. ಅವಶ್ಯವಾಗಿ ಸ್ವಯಂ ರಾಮನೇ ರಾಮ ರಾಜ್ಯವನ್ನು ಮಾಡುತ್ತಾರೆ. ಆದರೆ ಮನುಷ್ಯರ ಬುದ್ಧಿಯಲ್ಲಿ ರಾಮ ರಾಜ್ಯವೆಂದಾಗ ರಾಮ ಸೀತೆಯ ರಾಜ್ಯವನ್ನು ನೆನಪು ಮಾಡಿಕೊಳ್ಳುತ್ತಾರೆ. ಆದರೆ ಆ ರಾಮನ ರಾಜ್ಯದಲ್ಲಿ ರಾಮನಿಗೂ ಸುಖವಿರಲಿಲ್ಲ. ರಾಜನಾದ ರಾಮನ ಪತ್ನಿಯೇ ಅಪಹರಿಸಲ್ಪಟ್ಟಾಗ ಪ್ರಜೆಗಳ ಪಾಡೇನು? ಈ ಕಲಿಯುಗದ ರಾಜರ ಪತ್ನಿಯನ್ನೂ ಸಹ ಯಾರೂ ಕದಿಯುವುದಿಲ್ಲ. ಆದರೆ ಮನುಷ್ಯರು ರಾಮ-ಸೀತೆಗೆ ಏನೆಲ್ಲಾ ಹೇಳಿ ಬಿಟ್ಟಿದ್ದಾರೆ. ಈ ಮಾತುಗಳನ್ನು ತುಂಬಾ ತಿಳಿದುಕೊಳ್ಳಬೇಕಾಗಿದೆ. ವಾಸ್ತವವಾಗಿ ಪರಮಪಿತ ಪರಮಾತ್ಮನಿಗೆ ರಾಮನೆಂದು ಕರೆಯಲಾಗುವುದು. ನೀವೇ ತಾಯಿ-ತಂದೆ ಎಂದು ಮಹಿಮೆ ಮಾಡುತ್ತಾರೆ.... ಈಗ ಯಾವ ತಾಯಿ-ತಂದೆಗೆ ಈ ರೀತಿ ಮಹಿಮೆ ಮಾಡುತ್ತಾರೆ? ಒಬ್ಬರಂತೂ ಲೌಕಿಕ ತಾಯಿ-ತಂದೆ ಆಗಿದ್ದಾರೆ. ಆ ತಾಯಿ-ತಂದೆಗೆ ಈ ಮಹಿಮೆಯನ್ನು ಮಾಡುವುದಿಲ್ಲ. ಅಗತ್ಯವಾಗಿ ಬೇರೆ ಯಾರಾದರೂ ಪರಮಪಿತನಿದ್ದು ತಾಯಿಯು ಇರಬೇಕಾಗುತ್ತದೆ ಆದುದರಿಂದ ಪಾರಲೌಕಿಕ ತಾಯಿ-ತಂದೆ ಎಂದು ಗಾಯನವಿದೆ. ರಚೈತ ಯಾರು ಎಂದು ಕೇಳುತ್ತಾರೆ? ತಕ್ಷಣ ಪರಮಪಿತ ಪರಮಾತ್ಮನೆಂದು ಹೇಳುವ ಕಾರಣ ಅವರು ತಾಯಿ-ತಂದೆ ಆಗಿದ್ದಾರೆಂದು ಸಿದ್ಧವಾಗುತ್ತದೆ. ಈ ಸಮಯದಲ್ಲಿ ಇಬ್ಬರು ತಾಯಿ-ತಂದೆ ಇದ್ದಾರೆ. ಸತ್ಯಯುಗದಲ್ಲಿ ಕೇವಲ ಒಬ್ಬರೇ ತಾಯಿ-ತಂದೆ ಇರುತ್ತಾರೆ. ಲೌಕಿಕ ತಂದೆ-ತಾಯಿ ಇದ್ದರೂ ಸಹ ಇಲ್ಲಿ ಪರಮಾತ್ಮನಿಗೂ ತಾಯಿ-ತಂದೆ ಎಂದು ಹೇಳುತ್ತಾರೆ... ಈ ಸಮಯದಲ್ಲಿ ತಂದೆಯ ಮುಖಾಂತರ ಮಕ್ಕಳಿಗೆ ಅಪಾರವಾದ ಸುಖ ಪ್ರಾಪ್ತಿಯಾದ ನಂತರ ಸತ್ಯಯುಗದಲ್ಲಿ ಒಬ್ಬರೇ ತಾಯಿ-ತಂದೆ ಆಗುತ್ತಾರೆ. ಪಾರಲೌಕಿಕ ತಾಯಿ-ತಂದೆಯ ಮುಖಾಂತರ ಸ್ವರ್ಗದ ಸುಖ ಸಿಗುವ ಕಾರಣ ಆ ತಾಯಿ ತಂದೆಗೆ ಮಹಿಮೆ ಮಾಡುವರು. ಆದರೂ ಇಂತಹ ತಂದೆಯ ನೆನಪು ಮಾಡುವುದನ್ನು ಮರೆತು ಬಿಡುತ್ತಾರೆ. ತಂದೆ ಬಂದಿದ್ದಾರೆಂದು ನೀವು ಎಲ್ಲರಿಗೂ ತಂದೆ ಪರಿಚಯವನ್ನು ಕೊಡಬೇಕು. ಸಾಮಾನ್ಯವಾಗಿ ಶಿವನಿಗೆ ಹಾಗೂ ಬ್ರಹ್ಮನಿಗೆ ತಂದೆ ಎಂದು ಹೇಳುವರು. ಪ್ರಜಾಪಿತನ ಹೆಸರು ಪ್ರಖ್ಯಾತವಾಗಿದೆ. ಈ ರೀತಿ ಇವರಿಬ್ಬರೂ ತಂದೆ ಆಗಿದ್ದಾರೆ. ಲೌಕಿಕ ತಂದೆ ಹಾಗೂ ಪಾರಲೌಕಿಕ ಪರಮಪಿತ ಹೇಗೆ ಮಾತಾ ಪಿತ ಆಗಿದ್ದಾರೆಂಬ ರಹಸ್ಯಯುಕ್ತ ಮಾತುಗಳಿವೆ. ಆದುದರಿಂದ ಯಾರಾದರೂ ಬಂದಾಗ ಅವರನ್ನು ಪರಮಪಿತ ಪರಮಾತ್ಮ ಹಾಗೂ ಪ್ರಜಾಪಿತ ಬ್ರಹ್ಮನಿಗೂ ನಿಮಗೂ ಏನು ಸಂಬಂಧವೆಂದು ಕೇಳಬೇಕು. ಜಗದಂಬಾ ಹಾಗೂ ಬ್ರಹ್ಮಾಇಬ್ಬರೂ ಗುಪ್ತವಾಗಿದ್ದಾರೆ. ಈ ಬ್ರಹ್ಮಾ ಸಹ ಹಿರಿಯ ತಾಯಿ ಆಗಿದ್ದಾರೆ. ಅಲೌಕಿಕ

ತಂದೆಯ ನಾಮ ರೂಪ ದೇಶ ಕಾಲ ಎಲ್ಲವನ್ನು ತಿಳಿದುಕೊಂಡಿರುವರು. ಈಗ ನೀವು ಅವರಿಗೆ ಪಾರಲೌಕಿಕ ತಾಯಿ-ತಂದೆಯ ನಾಮ ರೂಪ ದೇಶ ಕಾಲ ಕರ್ತವ್ಯವನ್ನು ತಿಳಿಸಬೇಕು. ಮಮ್ಮಾರವರಿಗೂ ಇವರು ಹಿರಿಯ ತಾಯಿ ಆಗಿದ್ದಾರೆ. ಈ ಹಿರಿಯ ತಾಯಿ (ಬ್ರಹ್ಮಾ) ಮೂಲಕ ಮಕ್ಕಳನ್ನು ದತ್ತು ಮಾಡಿಕೊಂಡಾಗ ತಾಯಿ-ತಂದೆ ಇಬ್ಬರೂ ಕಂಬೈಂಡ್ ಆಗಿಬಿಡುತ್ತಾರೆ. ಇವರಿಗೆ ಮಾತ ಪಿತ ಅಥವಾ ಬಾಪ್ದಾದಾ ಎಂದು ಹೇಳುವರು. ಯಾರಿಗಾದರೂ ತುಂಬಾ ಉಪಾಯದಿಂದ ತಿಳಿಸಬೇಕು. ನಿರಾಕಾರ ಪರಮಪಿತ ಪರಮಾತ್ಮನನ್ನು ಎಲ್ಲರೂ ನೆನಪು ಮಾಡುತ್ತಾರೆ ಆದರೆ ಅವರು ತಾಯಿ-ತಂದೆ ಹೇಗೆ ಆಗುವರೆಂದು ತಿಳಿದುಕೊಂಡಿಲ್ಲ.... ಈ ರೀತಿ ದೊಡ್ಡ ಬೋರ್ಡ್ ಮೇಲೆ ಬರೆಯಬೇಕು. ಈ ಚಿಕ್ಕ ಮಾತನ್ನು ಸಹ ಮನುಷ್ಯರು ತಿಳಿದುಕೊಳ್ಳಲಾರರು, ಏಕೆಂದರೆ ತಂದೆಯು ನಮಗೆ ತುಂಬಾ ವಿಚಿತ್ರ ಮಾತುಗಳನ್ನು ತಿಳಿಸಿಕೊಡುತ್ತಾರೆ. ಆತ್ಮವು ಓ ಪರಮಪಿತ ಪರಮಾತ್ಮನೆಂದು ಹೇಳುತ್ತದೆ ಅವರು ಸಹ ಆತ್ಮಆಗಿದ್ದಾರೆ, ಆದರೆ ಪರಮ ಅರ್ಥಾತ್ ಶ್ರೇಷ್ಠ ಆಗಿದ್ದಾರೆ. ಅವರು ಪರಮಧಾಮದಲ್ಲಿ ಇರುತ್ತಾರೆ. ಅವರು ಸ್ವಯಂ ಜನನ ಮರಣದಲ್ಲಿ ಬರುವುದಿಲ್ಲ, ಆದರೆ ಅವರು ಈ ಸಾಕಾರ ಜಗತ್ತಿಗೆ ಬಂದು ನಮ್ಮನ್ನು ಪತಿತತನದಿಂದ, ಜನನ-ಮರಣದಿಂದ ಬಿಡಿಸುತ್ತಾರೆ. ಪಾವನರನ್ನು ಜನನ ಮರಣದಿಂದ ಬಿಡಿಸುವುದಿಲ್ಲ, ಪತಿತ ಆತ್ಮನನ್ನು ಪಾವನ ಆತ್ಮವನ್ನಾಗಿ ಮಾಡುವರು. ಆ ಕಾರಣ ಅವರನ್ನು ಪತಿತ ಪಾವನನೆಂದು ಕರೆಯಲಾಗುವುದು. ಮನುಷ್ಯರು ರಾಮ ಸೀತೆಯ ಅರ್ಥ ತಿಳಿದುಕೊಂಡಿಲ್ಲ. ವಾಸ್ತವದಲ್ಲಿ ಎಲ್ಲಾ ಭಕ್ತರು ಸೀತೆಯರು ಆಗಿರುವ ಕಾರಣ ಒಬ್ಬ ಪ್ರಿಯತಮ ಪರಮಾತ್ಮನನ್ನು ನೆನಪು ಮಾಡುತ್ತಾರೆ.

ಮಕ್ಕಳೇ ಈ ಸಮಯ ಇಡೀ ಪ್ರಪಂಚದಲ್ಲಿ ರಾವಣ ರಾಜ್ಯವಿದೆ ಎಂದು ತಂದೆ ತಿಳಿಸುತ್ತಾರೆ. ಕೇವಲ ಒಂದು ಲಂಕೆ ಮಾತ್ರ ರಾವಣ ರಾಜ್ಯವಾಗಿರಲಿಲ್ಲ, ರಾವಣನನ್ನು ಭಾರತದಲ್ಲಿಯೇ ಸುಡುತ್ತಾರೆ. ಶ್ರೀಲಂಕ ಹಿಂದೂಸ್ಥಾನದಲ್ಲಿ ಇಲ್ಲ, ಅದು ಬೌದ್ಧರ ಖಂಡವಾಗಿದೆ. ಆದರೆ ಈ ಸಮಯದಲ್ಲಿ ಇಡೀ ಪ್ರಪಂಚ ರಾವಣನ ಬಂಧನದಲ್ಲಿದೆ. ಪ್ರಪಂಚದಲ್ಲಿ ಪೂರ್ತಿ ರಾವಣ ರಾಜ್ಯವಿದೆ. ಅರ್ಧಕಲ್ಪ ರಾವಣ ರಾಜ್ಯ ಅರ್ಧಕಲ್ಪ ರಾಮ ರಾಜ್ಯವಿದೆ. ಅರ್ಧಕಲ್ಪ ದಿನ, ಅರ್ಧಕಲ್ಪ ರಾತ್ರಿ ಆಗಿರುತ್ತದೆ. ಈ ಎಲ್ಲಾ ಮಾತುಗಳನ್ನು ಬುದ್ಧಿಯಲ್ಲಿ ಇಟ್ಟುಕೊಳ್ಳಬೇಕು. ಈಗ ನೀವು ರಾವಣನ ಮೇಲೆ ವಿಜಯಿಗಳು ಆಗುತ್ತಿರುವಿರಿ. ಯಾರು ಸಂಪೂರ್ಣ ವಿಜಯಿಗಳು ಆಗುತ್ತಾರೆ, ಅವರೇ ಮಾಲೀಕರಾಗುವರು. ಸತ್ಯಯುಗದ ಆದಿಯಲ್ಲಿ ಲಕ್ಷ್ಮೀ ನಾರಾಯಣರ ರಾಜ್ಯವಿತ್ತು, ಅವರು ಈ ಸ್ವರ್ಗದ ಪ್ರಾಲಬ್ಧವನ್ನು ಎಲ್ಲಿಂದ ಹೇಗೆ ಪಡೆದುಕೊಂಡರು. ಸತ್ಯಯುಗದಲ್ಲಿ ಬಹಳ ಕಡಿಮೆ ಮನುಷ್ಯರಿದ್ದು ಲಕ್ಷಾಂತರ ಅಂದಾಜಿನಲ್ಲಿ ಇರುತ್ತಾರೆ. ಯಮುನಾ ದಡದಲ್ಲಿ ರಾಜಧಾನಿ ಇರುತ್ತದೆ, ಅಲ್ಲಿ ಯಾವುದೇ ವಿಕಾರ ಇರುವುದಿಲ್ಲ, ಅದನ್ನು ಸಂಪೂರ್ಣ ನಿರ್ವಿಕಾರಿ ಪ್ರಪಂಚ ಎಂದು ಕರೆಯಲಾಗುವುದು. ಯೋಗಬಲದಿಂದ ಮಕ್ಕಳ ಜನ್ಮವಾಗುತ್ತದೆ. ಅಲ್ಲಿ ಅಳುವುದಾಗಲೀ, ಹೊಡೆಯುವದಾಗಲೀ ಇರುವುದಿಲ್ಲ. ಆದರೆ ಮೊದಲು ಈ ಮಾತುಗಳನ್ನು ಬಿಟ್ಟು ಮುಖ್ಯ ಮಾತು ಪರಮಪಿತ ಪರಮಾತ್ಮ ಹಾಗೂ ನಾವು ಆತ್ಮಗಳು ಪರಲೋಕದಿಂದ ಬರುತ್ತೇವೆಅಂದಾಗ ಆ ಪಾರಲೌಕಿಕ ತಂದೆಯೊಂದಿಗೆ ನಿಮ್ಮ ಸಂಬಂಧವೇನು? ಎಂದು ಕೇಳುವುದು ನಂಬರ್‌ಒನ್ ಮಾತಾಗಿದೆ. ಮೊದಲಿಗೆ ತಂದೆಯ ಸಂಬಂಧವನ್ನು ಸ್ಪಷ್ಟ ಮಾಡಿದರೆ ತಾಯಿ ಹಾಗೂ ಆಸ್ತಿಯ ಸಂಬಂಧ ತಾನೇತಾನಾಗಿ ಸ್ಪಷ್ಟವಾಗುತ್ತದೆ. ಏಕೆಂದರೆ ಈಶ್ವರನನ್ನು ಮರೆತ ಕಾರಣ ಎಲ್ಲವನ್ನು ಮರೆತಿದ್ದಾರೆ. ರಾವಣನು ಮೊಟ್ಟ ಮೊದಲಿಗೆ ಈಶ್ವರನನ್ನು ಮರೆಸಿದ್ದಾನೆ, ಈಗ ಈಶ್ವರನ ಸಹಯೋಗದಿಂದ ನಾವು ರಾವಣನ ಮೇಲೆ ವಿಜಯಿಗಳಾಗುತ್ತೇವೆ. ಈ ರೀತಿ ತಿಳಿಸಿ ಕೊಡಲು ತುಂಬಾ ಪಾಯಿಂಟ್ಸ್ ಇವೆ. ಪ್ರದರ್ಶನಿಯಲ್ಲಿ ಮುಖ್ಯವಾಗಿ ಈಶ್ವರನ ಪರಿಚಯವನ್ನು ತಿಳಿಸಬೇಕು. ಈಶ್ವರನ ನಂತರ ಆಸ್ತಿಯು ಬಂದೇ ಬರುತ್ತದೆ. ಏಕೆಂದರೆ ಈಶ್ವರನನ್ನು ತಿಳಿದುಕೊಳ್ಳದೆ ಹೋದರೆ, ನೀವೆಷ್ಟೇ ತಿಳಿಸಿಕೊಟ್ಟರು ಏನೂ ತಿಳಿದುಕೊಳ್ಳಲು ಆಗುವುದಿಲ್ಲ. ಪರಮಪಿತನಿರುವಾಗ ಪಿತನಿಂದ ಆಸ್ತಿ ಸಿಗಬೇಕು. ತಂದೆಯಿಂದ ಆಸ್ತಿ ದೊರೆತಾಗ ಅವರ ಆಸ್ತಿಗೆ ಅಧಿಕಾರಿಗಳಾಗಿಯೇ ಬಿಡುತ್ತಾರೆ. ತ್ರಿಮೂರ್ತಿಗಳ ಬಗ್ಗೆ ತಿಳಿಸುವುದು ತುಂಬಾ ಸಹಜವಾಗಿದೆ, ಮೇಲೆ ತಂದೆ ಇದ್ದು ಕೆಳಗೆ ಲಕ್ಷ್ಮೀ ನಾರಾಯಣರೆಂಬ ಆಸ್ತಿ ವಿಷ್ಣು ನಿಂತಿರುವರು. ಆದುದರಿಂದ ತಂದೆ ತಿಳಿಸುತ್ತಾರೆ ನನ್ನನ್ನು ನೆನಪು ಮಾಡಿದಾಗ ಈ ಆಸ್ತಿ ಪಡೆದುಕೊಳ್ಳಬಹುದು. ಬಾಬಾ ನೀವು ನಿರಾಕಾರ ಆಗಿದ್ದು, ಆಸ್ತಿ ಹೇಗೆ ಕೊಡುತ್ತೀರೆಂದು ಮಕ್ಕಳು ಕೇಳುವರು. ಮಕ್ಕಳೇ ನಾನು ಈ ಬ್ರಹ್ಮಾರವರ ಮೂಲಕ ಆಸ್ತಿ ಕೊಡುತ್ತೇನೆ. ಯಾರಾದರೂ ತಿಳಿದುಕೊಳ್ಳಲು ಬಂದರೆ ಈ ಮಾತಿನ ಬಗ್ಗೆ ತಿಳಿಸಿಕೊಡಬೇಕು. ಮೊದಲು ತ್ರಿಮೂರ್ತಿಗಳ ಬಗ್ಗೆ ತಿಳಿಸಿಕೊಡಬೇಕು. ತ್ರಿಮೂರ್ತಿ ಬ್ರಹ್ಮಾ ಎಂಬ ಶಬ್ದಕ್ಕೆ ಅರ್ಥವಿಲ್ಲ. ನಿರಾಕಾರ ಶಿವ ತಂದೆ, ಅವರೇ ಜ್ಞಾನ ಸಾಗರ ಆಗಿದ್ದಾರೆ. ಅವರಿಂದ ಈ ಆಸ್ತಿ ಸಿಗುತ್ತದೆ. ಈಗ ತಂದೆಯಂತೂ ನಿರಾಕಾರ ಆಗಿದ್ದಾರೆ, ಅವರಿಂದ ಈ ಲಕ್ಷ್ಮೀ ನಾರಾಯಣರಿಗೆ ಆಸ್ತಿ ಎಲ್ಲಿಂದ ಹೇಗೆ ದೊರೆಯಿತು? ನಿಮ್ಮನ್ನು ವಿಷ್ಣು ಕುಮಾರರೆಂದು ಹೇಳಿಕೊಳ್ಳುವುದಿಲ್ಲ, ನೀವು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೀರಿ. ಬ್ರಹ್ಮಾ ಪುರಿಯೆಂದು ಮನುಷ್ಯರಿರುವ ಸ್ಥಾನಕ್ಕೆ ಹೇಳಲಾಗುವುದು. ಅದನ್ನು ಬ್ರಾಹ್ಮಣರು ರಚಿಸುತ್ತಾರೆ. ಸಿಂಧ್‌ನಲ್ಲಿಯೂ ಬ್ರಹ್ಮಾ ಪುರಿ ಎಂಬ ಸ್ಥಾನವಿತ್ತು, ಈ ಮಾತುಗಳನ್ನು ನಿಮಗೆ ಯಾರು ಹೇಳಿದರು? (ಶಿವ ತಂದೆ) ಸದಾ ಬಾಪ್ದಾದಾ ಜೊತೆಯಲ್ಲಿದ್ದಾರೆಂದು ಹೇಳಬೇಕು. ಒಮ್ಮೊಮ್ಮೆ ತಂದೆ, ಒಮ್ಮೊಮ್ಮೆ ದಾದಾ ಹೇಳುತ್ತಿರುತ್ತಾರೆ. ಎರಡೂ ಆತ್ಮಗಳ ಮುಖ ಒಂದೇ ಆಗಿರುವ ಕಾರಣ ಯಾರು ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಆ ರೀತಿ ಬಂಧನವೇನು ಇರುವುದಿಲ್ಲ. ಮೊದಲನೆಯ ಮಾತು ಜ್ಞಾನ ಸಾಗರ, ಗೀತೆಯ ಭಗವಂತ ತಂದೆ ಆಗಿದ್ದಾರೆ. ಅವರು ಈ ರೀತಿ ತಿಳಿಸುತ್ತಿದ್ದಾರೆ - ಈ ಬ್ರಹ್ಮಾ, ವಿಷ್ಣು, ಶಂಕರ ಸೂಕ್ಷ್ಮವತನವಾಸಿ ದೇವತೆಗಳಾಗಿದ್ದಾರೆ. ಈಗ ಬ್ರಹ್ಮಾ ಮನುಷ್ಯನಾಗಿದ್ದು ಸಂಪೂರ್ಣವಾದಾಗ ದೇವತೆ ಎಂದು ಕರೆಯಲಾಗುವುದು. ಅವರೂ ಸಹ ತಪಸ್ಸನ್ನು ಮಾಡಿ ದೇವತೆ

ಆಗುತ್ತಾರೆ. ಭಗವಂತ ಬ್ರಹ್ಮನ ಮುಖಾಂತರ ಬ್ರಹ್ಮಾಕುಮಾರ- ಕುಮಾರಿಯರಿಗೆ ತಪಸ್ಸನ್ನು ಕಲಿಸಿಕೊಡುತ್ತಾರೆ. ಈರೀತಿ ಚಿತ್ರಗಳ ಬಗ್ಗೆ ತಿಳಿಸಿಕೊಡಬೇಕು. ತಂದೆ ಹಾಗು ಆಸ್ತಿಯ ಈ ಜ್ಞಾನ ತುಂಬಾ ಸಹಜವಾಗಿದೆ. ಶಿವ ತಂದೆ ನಿರಾಕಾರನಾಗಿರುವ ಕಾರಣ ಬ್ರಹ್ಮನ ಮೂಲಕ ಆಸ್ತಿಯನ್ನು ಕೊಡುತ್ತಾ ಸ್ವರ್ಗ ಸ್ಥಾಪನೆ ಮಾಡುತ್ತಾರೆ. ದೇವತೆಗಳಾಗಲು ಅವಶ್ಯವಾಗಿ ಈಗ ಮಾತ್ರ ರಾಜಯೋಗವನ್ನು ಕಲಿಯುತ್ತೀರಿ. ಇದು ಶಿವ ಪುರಿ ಹಾಗು ವಿಷ್ಣು ಪುರಿಯಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಈಶ್ವರನ ನೆನಪಿನಿಂದ ಮಾಯಾ ರಾವಣನ ಮೇಲೆ ವಿಜಯವನ್ನು ಗಳಿಸಬೇಕು. ಎಲ್ಲರಿಗೂ ತಂದೆಯ ಪರಿಚಯ ನೀಡಬೇಕು.

2. ನೆನಪಿನ ಯಾತ್ರೆಯಲ್ಲಿ ಎಂದೂ ಧಣಿಯಬಾರದು. ತಮ್ಮ ಬ್ಯಾಟರಿ ಚಾರ್ಜ್ ಮಾಡಿಕೊಳ್ಳುವ ಸಲುವಾಗಿ ಸರ್ವಶಕ್ತಿವಂತ ತಂದೆಯನ್ನು ನೆನಪು ಮಾಡಬೇಕು.

ವರದಾನ: ಒಬ್ಬ ತಂದೆಯ ನೆನಪಿನಿಂದ ಏಕರಸ ಸ್ಥಿತಿಯ ಅನುಭವ ಮಾಡುವಂತಹ ಸಾರ ಸ್ವರೂಪ ಭವ.

ಏಕರಸ ಸ್ಥಿತಿಯಲ್ಲಿಯಿರುವ ಸಹಜ ವಿಧಿಯಾಗಿದೆ - ಒಬ್ಬರ ನೆನಪು. ಒಬ್ಬ ತಂದೆಯ ಹೊರತು ಮತ್ತ್ಯಾರೂ ಇಲ್ಲ. ಹೇಗೆ ಬೀಜದಲ್ಲಿ ಎಲ್ಲವೂ ಸಮಾವೇಶವಾಗಿರುತ್ತದೆಯೋ ಹಾಗೆಯೇ ತಂದೆಯೂ ಸಹ ಬೀಜವಾಗಿದ್ದಾರೆ, ಅವರಲ್ಲಿ ಸರ್ವ ಸಂಬಂಧಗಳ, ಸರ್ವ ಪ್ರಾಪ್ತಿಗಳ ಸಾರವು ಸಮಾವೇಶವಾಗಿದೆ. ಒಬ್ಬ ತಂದೆಯನ್ನು ನೆನಪು ಮಾಡುವುದೆಂದರೆ ಸಾರ ಸ್ವರೂಪರಾಗುವುದು. ಅಂದಮೇಲೆ ಒಬ್ಬ ತಂದೆಯ ಹೊರತು ಮತ್ತ್ಯಾರೂ ಇಲ್ಲ - ಇದೊಂದು ನೆನಪು ಏಕರಸ ಸ್ಥಿತಿಯನ್ನಾಗಿ ಮಾಡುತ್ತದೆ. ಯಾರು ಸುಖದಾತ ತಂದೆಯೊಬ್ಬರ ನೆನಪಿನಲ್ಲಿರುತ್ತಾರೆಯೋ ಅವರ ಬಳಿ ದುಃಖದ ಪ್ರಕಂಪನಗಳೆಂದಿಗೂ ಬರಲು ಸಾಧ್ಯವಿಲ್ಲ. ಅವರ ಸ್ವಪ್ನವೂ ಸುಖದ, ಖುಷಿಯ, ಸೇವೆಯ ಹಾಗೂ ಮಿಲನ ಮಾಡುವುದೇ ಬರುತ್ತದೆ.

ಸ್ಲೋಗನ್: ಶ್ರೇಷ್ಠ ಆಶಾ ದೀಪವನ್ನು ಬೆಳಗಿಸುವವರೇ ಸತ್ಯ ಕುಲದೀಪವಾಗಿದ್ದಾರೆ.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ:

``ಪರಮಾತ್ಮನ ಮೂಲಕ ಮೊಟ್ಟ ಮೊದಲ ಲಾಟರಿಯನ್ನೇಕೆ ವಿಜಯ ಗಳಿಸಬಾರದು"

ನೋಡಿ, ಬಹಳ ಮನುಷ್ಯರು ಈ ರೀತಿ ತಿಳಿಯುತ್ತಾರೆ - ನಾವೂ ಸಹ ಸ್ವಲ್ಪ ಪುರುಷಾರ್ಥ ಮಾಡುವುದರಿಂದಲೂ ವೈಕುಂಠದಲ್ಲಂತು ಬಂದು ಬಿಡುತ್ತೇವಲ್ಲವೆ, ಆದರೆ ಅವರು ಇದನ್ನು ವಿಚಾರ ಮಾಡಬೇಕು - ಪರಮಾತ್ಮ ತಂದೆಯು ಬಂದಿದ್ದಾರೆ ಅಂದಮೇಲೆ ಸಂಪೂರ್ಣ ಆಸ್ತಿಯನ್ನು ತೆಗೆದುಕೊಳ್ಳುವುದಕ್ಕಾಗಿ ವಿದ್ಯಾರ್ಥಿಯ ಕಾರ್ಯವಾಗಿದೆ - ಸಂಪೂರ್ಣ ಪುರುಷಾರ್ಥ ಮಾಡಿ ವಿದ್ಯಾರ್ಥಿ ವೇತನವನ್ನು ಪಡೆಯುವುದು. ಈ ರೀತಿಯಿದ್ದಾಗ ಮೊಟ್ಟ ಮೊದಲ ಲಾಟರಿಯನ್ನೇ ಪಡೆಯಬಾರದು! ಅದಾಗಿದೆ ವಿಜಯ ಮಾಲೆಯಲ್ಲಿ ಪೋಣಿಸಲ್ಪಡುವುದು. ಉಳಿದ ಇಬ್ಬರು ಇಲ್ಲಿನದೇ ಅಲ್ಪಕಾಲದ ಸುಖವನ್ನು ಪಡೆಯೋಣ ಮತ್ತು ಅಲ್ಲಿನ ವೈಕುಂಠದಲ್ಲಿಯೂ ಸ್ವಲ್ಪವಾದರೂ ಸುಖ ತೆಗೆದುಕೊಳ್ಳೋಣವೆಂಬ ಲಡ್ಡುವನ್ನು ಹಿಡಿದುಕೊಂಡು ಕುಳಿತಿದ್ದಾರೆ. ಇಂತಹ ವಿಚಾರವಿರುವವರಿಗೆ ಮಧ್ಯಮ ಮತ್ತು ಕನಿಷ್ಠ ಪುರುಷಾರ್ಥಿ ಎಂದು ಹೇಳುವರೇ ಹೊರತು ಸರ್ವೋತ್ತಮ ಪುರುಷಾರ್ಥಿ ಎನ್ನುವುದಿಲ್ಲ. ಯಾವಾಗ ತಂದೆಯವರು ಕೊಡುವುದರಲ್ಲಿ ಮತಭೇದ ಮಾಡುವುದಿಲ್ಲ ಅಂದಮೇಲೆ ತೆಗೆದುಕೊಳ್ಳುವವರೇಕೆ ಮಾಡುತ್ತೀರಿ? ಅದಕ್ಕಾಗಿ ಗುರುನಾನಕರು ಹೇಳಿದರು - ಪರಮಾತ್ಮನಂತು ದಾತಾ, ಸಮರ್ಥ ಆಗಿದ್ದಾರೆ ಆದರೆ ಆತ್ಮರಲ್ಲಿ ತೆಗೆದುಕೊಳ್ಳುವ ಶಕ್ತಿಯಿಲ್ಲ, ಕೊಡುವವರು ಕೊಡುತ್ತಾರೆ ಆದರೆ ತೆಗೆದುಕೊಳ್ಳುವವರು ಸುಸ್ತಾಗಿ ಬಿಡುತ್ತಾರೆ. ತಮ್ಮ ಹೃದಯದಲ್ಲಿಯೂ ನಾವೂ ಈ ಪದವಿ ಪಡೆಯೋಣವೆಂಬ ಇಚ್ಛೆಯನ್ನು ಇಡುವುದಿಲ್ಲ ಎಂಬುದು ಬರುತ್ತದೆ, ಆದರೆ ನೋಡಿ- ಬಾಬಾರವರು ಎಷ್ಟೊಂದು ಪರಿಶ್ರಮ ಪಡುತ್ತಾರೆ ಆದರೂ ಮಾಯೆ ಎಷ್ಟೊಂದು ವಿಘ್ನವನ್ನು ಹಾಕುತ್ತದೆ, ಏಕೆ? ಈಗ ಮಾಯೆಯ ರಾಜ್ಯವು ಸಮಾಪ್ತಿಯಾಗುವುದಿದೆ. ಈಗ ಮಾಯೆಯ ಸಂಪೂರ್ಣ ಶಕ್ತಿಯೇ ಹೊರಟು ಹೋಗಿದೆ, ಆದ್ದರಿಂದಲೇ ಪರಮಾತ್ಮನು ಬರುತ್ತಾರೆ, ಅವರಲ್ಲಿ ಎಲ್ಲಾ ಶಕ್ತಿಗಳು ಸಮಾವೇಶವಾಗಿದೆ. ಅವರೊಂದಿಗೆ ಸರ್ವ ಸಂಬಂಧಗಳ ಪ್ರಾಪ್ತಿಯಾಗುವುದು ಆದ್ದರಿಂದಲೇ ತ್ವಮೇವ ಮಾತಾಶ್ಚ ಪಿತಾ ತ್ವಮೇವ..... ಇತ್ಯಾದಿ.... ಈ ಮಹಿಮೆಯು ಆ ಪರಮಾತ್ಮನದೇ ಆಗಿದೆ. ಅಂದಮೇಲೆ ಬಲಿಹಾರಿಯು ಇದೇ ಸಮಯದ್ದಾಗಿದೆ, ಆದ್ದರಿಂದ ಇಂತಹ ಸಂಬಂಧವಾಗಿದೆ. ಒಳ್ಳೆಯದು. ಓಂ ಶಾಂತಿ.